# ತೇರದಾಳ ಪರಿಸರದ ಬೃಹತ್ ಶಿಲಾಯುಗದ ನೆಲೆಗಳು

**ರಮೇಶ ಕುಂಬಾರ**

ಉಪನ್ಯಾಸಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ರಬಕವಿ, ಬನಹಟ್ಟಿ.

DOI: https://doi.org/10.5281/zenodo.17296660

## ABSTRACT:

'ಚರಿತ್ರೆ' ಕೇವಲ ಗತಕಾಲದ ಕಥನವಲ್ಲ. ಬದಲಾಗಿ ಅದು ವರ್ತಮಾನದ ಮಾನವನ ಸಮಗ್ರ ಮತ್ತು ವ್ಯವಸ್ಥಿತ ದಾಖಲೆಯೂ ಹೌದು. ಚರಿತ್ರೆ ಮಾನವನ ಸಮಗ್ರ ಜೀವನಕ್ರಮ ಮತ್ತು ಘಟನಾವಳಿಗಳನ್ನು ಕಾಲಾನುಕ್ರಮದಲ್ಲಿ ಅಧ್ಯಯನ ಮಾಡುವ ಜ್ಞಾನ ಶಿಸ್ತುವಾಗಿದ್ದು, ಮಾನವ ಪ್ರಗತಿಯನ್ನು ಅರಿಯಲು ಅದು ಸಹಾಯಕವಾಗಿದೆ. ಚರಿತ್ರೆಯನ್ನು ಮರೆತವನು ಚರಿತ್ರೆಯನ್ನು ಸೃಷ್ಟಿಸಲಾರ. "ಚರಿತ್ರೆ ಎಂದರೆ ಅದು ಸಮಯ ಸಂದರ್ಭದ ಕೂಸು ಮತ್ತು ಅದು ಯಾವಾಗಲೂ ಇತಿಹಾಸಕಾರನ ಆಯ್ಕೆಯಾಗಿರುತ್ತದೆ" ತಾಲೂಕು ಕೇಂದ್ರ ಜಮಖಂಡಿಯಿಂದ ಪಶ್ಚಿಮಕ್ಕೆ 29 ಕಿ.ಮೀ. ದೂರದಲ್ಲಿರುವ ತೇರದಾಳವು ಹಲವಾರು ವಿಭಿನ್ನ ವೈಶಿಷ್ಟ್ಯತೆಗಳಿಗೆ ಹೆಸರುವಾಸಿಯಾಗಿದೆ. ತೇರದಾಳ ಪರಿಸರದ 5 ಕಿ.ಮೀ. ಅಂತರದಲ್ಲಿಯೇ ಉತ್ತರಕ್ಕೆ ಕೃಷ್ಣಾ ನದಿ ಪೂರ್ವದತ್ತ ಹರಿಯುತ್ತಿದೆ. ಇದು ಅಂದಿನ ದಿನಮಾನಗಳಲ್ಲಿ ಜನವಸತಿ ನೆಲೆಗಟ್ಟುಗಳ ಅವಶೇಷಗಳಿಂದ ತುಂಬಿದೆ. ಅಲ್ಲದೆ ಇದೇ ಪರಿಸರದ 4 ಕಿ.ಮೀ. ದೂರದಲ್ಲಿ 'ಕಡ್ಲಿಪಲ್ಲಿ' ಎಂಬ ಗುಡ್ಡದ ಉತ್ತರ ದಿಕ್ಕಿಗೆ ಬರುವ ಹಳಿಂಗಳಿ, ಹನಗಂಡಿ, ಮದನಮಟ್ಟಿ, ಆಸಂಗಿಯ ಸುತ್ತಮುತ್ತಲಿನ ಪರಿಸರದಲ್ಲಿ ಬೃಹತ್ ಶಿಲಾಯುಗದ ಗೋರಿಗಳಿದ್ದು ಸುಮಾರು 1000ಕ್ಕಿಂತ ಹೆಚ್ಚು ಕಂಡುಬರುತ್ತವೆ.

## KEYWORDS:

ಕಡ್ಲಿಪಲ್ಲಿ, ಭದ್ರಗಿರಿ, ಶಿಲಾಯುಗದ ಗೋರಿ, ಬೃಹತ್ ಕಬ್ಬಿಣ ಯುಗ, ಕುರುಹು, ಅನ್ವೇಷಣಾ, ಟೋಪಿಕಲ್ಲು.

**ಪ್ರಸ್ತಾವನೆ:**

ಇಂದಿನ ಪ್ರಾಚೀನ ಐತಿಹಾಸಿಕ ತೇರದಾಳ ಒಟ್ಟು ಭೌಗೋಳಿಕ ವಿಸ್ತೀರ್ಣ ಸುಮಾರು 525 ಚ.ಕಿ.ಮೀ. ವಿಸ್ತಾರವನ್ನು ಹೊಂದಿದೆ. 2011ರ ಪ್ರಕಾರ 26,153 ರಷ್ಟು ಜನಸಂಖ್ಯೆಯನ್ನು ಹೊಂದಿದೆ. ತೇರದಾಳ ನಗರವು ಬಯಲು ಹಾಗೂ ಸಮತೋಲದಲ್ಲಿರುವುದರಿಂದ ವರ್ಷದ ಬಹುಕಾಲದ ಒಣ ಹವೆಯಿಂದ ಕೂಡಿರುತ್ತದೆ. ಈ ಊರನ್ನು 'ರಾಜಧಾನಿ ತೇರಿದಾಳ', 'ತೇರದಾಳ' ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಕ್ರಿ.ಶ. 1123ರ ಶಾಸನದಲ್ಲಿ ಈ ತೇರದಾಳ–12ರ ವರ್ಣನೆ ಉಲ್ಲೇಖಿತವಾಗಿದ್ದು, ಆ ಕುರಿತ ವಿವರ ಈ ಮುಂದಿದೆ.

ಇವುಗಳಲ್ಲಿ ತೇರದಾಳ ಬೆಟ್ಟ ಸಮೂಹವು ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದ್ದು, ಪ್ರಾಚೀನ ಕಾಲದಿಂದಲೂ ಮಾನವ ಸಂಸ್ಕೃತಿಗೆ ಅವಕಾಶ ಕಲ್ಪಿಸಿಕೊಟ್ಟಿದೆ. ಈ ಪ್ರದೇಶದಲ್ಲಿ ಉಸುಕು ಮತ್ತು ಕಲ್ಲಿನ ದಿಣ್ಣೆಗಳಿವೆ. (ಸುಣ್ಣಗುಡ್ಡ) ತೇರದಾಳದ ಹೆಚ್ಚು ಭಾಗ ಬೋಳು ಬೆಟ್ಟಗಳಿಂದ ಕೂಡಿದ್ದು, ಅಲ್ಲಲ್ಲಿ ಕೆಲ ಕಣಿವೆಗಳಿವೆ. ಇಲ್ಲಿನ ಬೆಟ್ಟಗಳು ದಕ್ಷಿಣ ಆಗ್ನೇಯದಿಂದ ಉತ್ತರ ವಾಯುವ್ಯದ ಕಡೆಗೆ ಸಮಾನಾಂತರದಲ್ಲಿ ಸಾಗಿವೆ. ಅದರಲ್ಲಿ ತೇರದಾಳ ಬೆಟ್ಟ ಪ್ರದೇಶವು ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾಗಿದೆ. ಇಲ್ಲಿನ ಹಲವು ಪರ್ವತಗಳು ತನ್ನದೇ ಆದ ವೈಶಿಷ್ಟ್ಯತೆಗಳನ್ನು ಹೊಂದಿವೆ. ಅವುಗಳಲ್ಲಿ ತೇರದಾಳ ಸಮೀಪದ ಭದ್ರಗಿರಿ ಬೆಟ್ಟ 3,863 ಅಡಿ ಎತ್ತರವಾಗಿದ್ದು, ಹನಗಂಡಿ ಬೆಟ್ಟವು 3,804 ಅಡಿ ಎತ್ತರವಾಗಿದೆ.

ಆಸಂಗಿ ಗುಡ್ಡವು 3,700 ಅಡಿ ಹಾಗೂ ಹಳಿಂಗಳಿ ಗುಡ್ಡವು 3285 ಅಡಿ ಎತ್ತರವನ್ನು ಹೊಂದಿವೆ13. ಜನರು ಹಳಿಂಗಳಿ, ಹನಗಂಡಿ, ಮದನಮಟ್ಟಿ, ಆಸಂಗಿ, ಅಸ್ಕಿ, ತೇರದಾಳ, ಮೊದಲಾದ ಪ್ರದೇಶದಲ್ಲಿ ನಿರ್ಮಿಸಿರುವ ಬೃಹತ್ ಶಿಲಾಗೋರಿಗಳು.

**ಬೃಹತ್ ಶಿಲಾಯುಗ ನೆಲೆಗಳು (ಕ್ರಿ.ಪೂ. 1200–200)**

ಸತ್ತ ಮನುಷ್ಯನ ದೇಹ (ನಿರ್ಜೀವವಾದ ದೇಹ)ವನ್ನು ಹೂತು (ಸಮಾಧಿಮಾಡಿ) ಅದರ ಮೇಲೆ ಬೃಹತ್ ಶಿಲೆಗಳಿಂದ ಗೋರಿಗಳನ್ನು ಕಟ್ಟುವುದಕ್ಕೆ ಬೃಹತ್ ಶಿಲಾಯುಗ (ಮೆಗಾಲಿಥಿಕ್ ಏಜ್) ಎಂದು ಕರೆಯಲಾಗುತ್ತಿದೆ. ಜೊತೆಗೆ ಈ ಹಂತದಲ್ಲಿ ಕಬ್ಬಿಣದ ಬಳಕೆ ಆರಂಭಗೊಂಡಿದ್ದರಿಂದ ಈ ಕಾಲವನ್ನು ಕಬ್ಬಿಣಯುಗವೆಂತಲೂ (ಐರನ್ ಏಜ್) ಕರೆಯಲಾಗುತ್ತದೆ. ಶವ ಸಂಸ್ಕಾರದ ಜೊತೆಗೆ ಆ ವ್ಯಕ್ತಿ ದಿನನಿತ್ಯ ಬಳಸುತ್ತಿದ್ದ ವಸ್ತುಗಳನ್ನು ಗೋರಿಗಳಲ್ಲಿ ಸಾಮಾನ್ಯವಾಗಿ ಇಡುತ್ತಿದ್ದರು. ಸಾಮಾನ್ಯವಾಗಿ ಹಳ್ಳಿಯಲ್ಲಿ ಇವುಗಳನ್ನು 'ಮೋರಿಯರ ಮನೆ, ಪಾಂಡವರ ಮನೆ, ಗಿಡ್ಡರ ಮನೆ ಗೂಡು' ಇವೇ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಈ ಒಂದು ಸಂಸ್ಕೃತಿಯ ಕುರುಹುಗಳು ಜಗತ್ತಿನಾದ್ಯಂತ ನಾನಾ ಭಾಗಗಳಲ್ಲಿ ಕಂಡು ಬರುತ್ತವೆ. ದಕ್ಷಿಣ ಭಾರತದ ಮಟ್ಟಿಗೆ ಮೊಟ್ಟ ಮೊದಲ ಬೃಹತ್ ಶಿಲಾಯುಗದ ಗೋರಿಗಳನ್ನು ಕೇರಳ ರಾಜ್ಯದ ಬವಿಗೆಟನ್ ಎಂಬಲ್ಲಿ ಗುರುತಿಸಲಾಯಿತು35. ಅದೇ ರೀತಿಯಾಗಿ ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಈ ಸಂಸ್ಕೃತಿಯ ಕುರುಹುಗಳನ್ನು ತೇರದಾಳ ಸುತ್ತ ಮುತ್ತಲಿನ ಪ್ರದೇಶದಲ್ಲಿ ಪತ್ತೆ ಹಚ್ಚಿದವರೆಂದರೆ ಬ್ರಿಟಿಷ್ ಅಧಿಕಾರಿಯಾಗಿದ್ದ ಮೇಡೋಸ್ ಟೇಲರ್ ಅವರು ಕ್ರಿ.ಶ. 1851–1853 ತಗುಲ್ಬರ್ಗಾ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಈ ಕುರುಹುಗಳನ್ನು ಪತ್ತೆ ಹಚ್ಚಿದರು. ಅಲ್ಲದೇ ಈ ಸಂಸ್ಕೃತಿಯ ಮೇಲೆ ವಿಶೇಷ ಬೆಳಕನ್ನು ಚೆಲ್ಲಿದವರೆಂದರೆ ಕಾಂಗ್ರೇವ್, ಮೆಕೆನ್ಜೆ, ಅಲೆಗ್ಸಾಂಡರ್ ರೇ, ಡಾ. ಪಿ. ಡಿ. ಕೃಷ್ಣಸ್ವಾಮಿ, ಶ್ರೀ. ಎಮ್. ಎಚ್. ಕೃಷ್ಣ ಅ. ಸುಂದರ, ಡಾ. ರಮೇಶ ನಾಯ್ಕ. ಡಾ. ಎಮ್. ಎನ್. ಬೆನ್ನೂರ. ಡಾ. ಎಚ್. ತಿಪ್ಪೇಸ್ವಾಮಿ ಡಾ. ರಮೇಶ ಕುಂಬಾರ ಮುಂತಾದ ಇತಿಹಾಸಕಾರರು.

ತೇರದಾಳ ಹಾಗೂ ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಈ ಕಾಲಘಟ್ಟಕ್ಕೆ ಸೇರಿದ ಸುಮಾರು 1000ಕ್ಕಿಂತ ಹೆಚ್ಚು ಶಿಲಾ ಗೋರಿಗಳು ಕಂಡುಬರುತ್ತವೆ. ಈ ಪರಿಸರದಲ್ಲಿ ಕೃಷ್ಣಾ ನದಿಯ ದಂಡೆಯ ಮೇಲೆ ಬರುವ ಪ್ರದೇಶಗಳ ಸುಮಾರು 9 ಕಿಲೋ ಮೀಟರ್ ಪ್ರದೇಶದ ಅಂತರದಲ್ಲಿ ಈ ಕಾಲದ ನೆಲೆಗಳು ಕೇಂದ್ರಿಕೃತವಾಗಿವೆ. ತೇರದಾಳ ಸಮೀಪದ ಕಡ್ಲಿಪಲ್ಲಿ ಎಂಬ ಹೆಸರಿನ ಗುಡ್ಡದಲ್ಲಿ ಹಲವು ಬೃಹತ್ ಶಿಲಾಗೋರಿಗಳನ್ನು ಕಾಣುತ್ತೇವೆ. ಅದೇ ರೀತಿ ತೇರದಾಳದ ಉತ್ತರದಲ್ಲಿರುವ ಗುಡ್ಡ ಪ್ರದೇಶದ ಸಮೀಪದಲ್ಲಿನ ಹನಗಂಡಿ, ಹಳಿಂಗಳಿ, ಮದನಮಟ್ಟಿ ಮತ್ತು ಆಸಂಗಿ ಪರಿಸರದೊಳಗೆ ನೂರಾರು ಬೃಹತ್ ಶಿಲಾಗೋರಿಗಳು ಐದು ಕಿ.ಮೀ. ಪ್ರದೇಶದಲ್ಲಿ ವ್ಯಾಪಿಸಿವೆ. ಗ್ರಾಮಗಳಲ್ಲಿ ಈ ಬೃಹತ್ ಶಿಲಾಯುಗದ ಗೋರಿಗಳಿವೆ. 'ತೇರದಾಳ' ನೆಲೆಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿದವರೆಂದರೆ "ಕನ್ನಡ ಸಂಶೋಧನ ಕೇಂದ್ರ" ಧಾರವಾಡದ ಡಾ. ಎ. ಎಮ್. ಅಣ್ಣಿಗೇರಿಯವರು ಹಾಗೂ ವಿದ್ವಾಂಸರಾದ ಪ್ರೊ. ಅ. ಸುಂದರರವರು, ತೇರದಾಳ ಹಾಗೂ ಅದರ ಸುತ್ತಲಿನಲ್ಲಿ ಸಿಗುವ ಈ ಗೋರಿಗಳು ಗ್ರೀಕ್ ಅಥವಾ ಲ್ಯಾಟಿನ್ ಮಾದರಿಯ ಪಾಸೆಜ್ ಚೇಂಬರ್ಗಳನ್ನು ಹೊಂದಿವೆ ಎಂದು ವಿಶೇಷವಾಗಿ ಅವರು ತೋರಿಸಿ ಕೊಟ್ಟಿದ್ದಾರೆ37. ಅವರು ಕೊಣ್ಣೂರು ಮತ್ತು ಸವದತ್ತಿಯಲ್ಲಿ ಅನ್ವೇಷಣಾ ಕಾರ್ಯದಲ್ಲಿ ಇರುವ ಶಿಲಾಗೋರಿಗಳನ್ನು ಆಧಾರವಾಗಿಟ್ಟುಕೊಂಡು ತೇರದಾಳ, ಸುತ್ತ ಮುತ್ತಲಿನ ಪರಿಸರದಲ್ಲಿ ಹನಗಂಡಿ ಮತ್ತು ಹಳಿಂಗಳಿ ಈ ಪ್ರದೇಶಗಳಲ್ಲಿ ಹಾದಿ ಕೋಣೆ

ಗೋರಿಗಳು ಮತ್ತು ಚಿಕ್ಕ ಚೌಕಾದ ಕೋಣೆ ಗೋರಿಗಳು. ಹಾಗೂ ವೃತ್ತ ಕಲ್ಲುರಾಶಿಗಳನ್ನು ಹೊಂದಿರುವಂತಹ ಗೋರಿಗಳು ಎನ್ನುವ ಮೂರು ಪ್ರಕಾರಗಳನ್ನು ಗುರುತಿಸಿದ್ದಾರೆ. ಐತಿಹಾಸಿಕ ತೇರದಾಳ ಪ್ರದೇಶದ ವಿವಿಧ ನೆಲೆಗಳಲ್ಲಿ ದೊರೆತಿರುವ ಹಾದಿ ಕೋಣೆ ಗೋರಿಗಳನ್ನು ಪುನಃ ಅವರು ಮೂರು ಪ್ರಕಾರಗಳಲ್ಲಿ ವಿಂಗಡಣೆ ಮಾಡಿದ್ದಾರೆ.

**1. ಗ್ರೀಕ್ ಅಥವಾ ಲ್ಯಾಟಿನ್ ಮಾದರಿಯ ಅಡ್ಡಾದ ಹಾದಿ ಕೋಣೆ ಗೋರಿಗಳು**

**2. ಹಾದಿವುಳ್ಳ ವೃತ್ತಾಕಾರದ ಕೋಣಿ ಗೋರಿಗಳು**

**3. ಕೊಣ್ಣೂರು ಮಾದರಿಯ ಹಾದಿ-ಕೋಣೆ ಗೋರಿಗಳು**

ಇವುಗಳಲ್ಲಿ ತೇರದಾಳದ ಪಶ್ಚಿಮ ಮತ್ತು ಉತ್ತರಕ್ಕೆ ಹೆಚ್ಚಾಗಿ ಗ್ರೀಕ್ ಅಥವಾ ಲ್ಯಾಟಿನ್ ಮಾದರಿಯ ಅಡ್ಡಾದ ಹಾದಿ ಕೋಣೆ ಗೋರಿಗಳು ಹೆಚ್ಚಾಗಿ ಕಾಣಬಹುದೆಂಬುದನ್ನು ಅವರು ಸಾಕ್ಷಿ ಸಮೇತವಾಗಿ ನಿರೂಪಿಸಿದ್ದಾರೆ.

## 1. ಗ್ರೀಕ್ ಅಥವಾ ಲ್ಯಾಟಿನ್ ಮಾದರಿಯ ಅಡ್ಡಾದ ಹಾದಿ ಕೋಣೆ ಗೋರಿಗಳು

ಈ ಗೋರಿಗಳು ಸಾಮಾನ್ಯವಾಗಿ ಉದ್ದವಾಗಿದ್ದು ಉತ್ತರ-ದಕ್ಷಿಣವಾಗಿವೆ. ಇದರಲ್ಲಿಯ ಹಾದಿ (ದಾರಿ) ಬಹಳ ಚಿಕ್ಕದಾಗಿರುತ್ತದೆ. ಗೋರಿಯ ಹಾದಿ ಕೋಣೆದ ಸ (ಚೇಂಬರ್) ಗಿಂತ ಮೇಲೆ ರಚಿತವಾಗಿರುತ್ತದೆ. ಇದರಲ್ಲಿ ಸಾಮಾನ್ಯವಾಗಿ 9 (ಅರ್ತೋಸ್ಟ್ಯಾಟ್ಸ್) ಗಳು ಎಂಟು ಕಡೆಗೆ ಇರುತ್ತವೆ. ಗೋರಿಗಳ ಮೇಲ್ಗಡೆಗೆ ಕಲ್ಲು ಚಪ್ಪಡಿಗಳನ್ನು ಸರಿಯಾಗಿ ಇರುತ್ತವೆ. (ಕ್ಯಾಪ್ ಸ್ಟೋನ್) ಪೂರ್ವ, ಪಶ್ಚಿಮ ಮತ್ತು ಉತ್ತರಕ್ಕೆ ಕಲ್ಲನ್ನು ನಿಲ್ಲಿಸಿ ಮೇಲೊಂದು ಕಲ್ಲನ್ನು ಇಟ್ಟಿರುತ್ತಾರೆ. ಇದಕ್ಕೆ 'ಟೋಪಿಕಲ್ಲು' ಎಂದೂ ಕೂಡಾ ಕರೆಯುತ್ತಾರೆ. ಮೇಲಿನ ಕಲ್ಲು ಗೋರಿಯ ಆಕಾರಕ್ಕೆತಕ್ಕಂತೆ ವಿಶಾಲವಾಗಿರುತ್ತದೆ. ಕೆಲವೊಂದು ಗೋರಿಗಳಲ್ಲಿ ನಾಲ್ಕು ಕಡೆ ಕಲ್ಲು ಚಪ್ಪಡಿಗಳಿಟ್ಟು ಜೋಡಿಸಲಾಗಿದೆ. ರಂಧ್ರ ಕೂಡ ಇರುವುದಿಲ್ಲ. ಹಾದಿ ಕೋಣೆ ಗೋರಿಗಳು ಕೆಲವು ಸಲ ಕಲ್ಲು ರಾಶಿಗಳಿಂದ ಮೇಲಿನ (ಟೋಪಿ ಕಲ್ಲಿನ)ವರೆಗೆ ಮುಚ್ಚಿರುತ್ತಾರೆ. ಈ ಹಾದಿ ಕೋಣೆ ಗೋರಿಗಳು ಮೇಲಿನ ಕಲ್ಲು ರಾಶಿಗಳು ಆಯತಾಕಾರಗಳಾಗಿದ್ದರೆ ಕೆಲವೊಮ್ಮೆ ವೃತ್ತಾಕಾರವಾಗಿರುತ್ತವೆ. ಮೇಲಿನ ಟೋಪಿ ಕಲ್ಲಿಗೆ ಆಧಾರವಾಗಿ ಕಂಬಗಳನ್ನು ನಿಲ್ಲಿಸುತ್ತಿದ್ದರು. ತೇರದಾಳದಲ್ಲಿ 24 ಮೀಟರ್ x 8 ಮೀಟರ್ ಅಳತೆಯನ್ನು ಹೊಂದಿರುವ ಗೋರಿಯೊಂದನ್ನು ಪ್ರೊ. ಅ. ಸುಂದರರವರು ಪತ್ತೆ ಹಚ್ಚಿದ್ದಾರೆ. ಕೆಲವು ಸಲ ಅದೇ ವೃತ್ತದಲ್ಲಿಯ ಗೋರಿಗಳನ್ನು ಕಲ್ಲು ರಾಶಿಗಳಿಂದ ಸುತ್ತುವರಿಸುತ್ತಿದ್ದರು. ಈ ಕಲ್ಲು ರಾಶಿಗಳ ಸುತ್ತುವರೆಗೆ ಆಯಾ ಗೋರಿಗಳ ಅಳತೆಯನ್ನು ಹೊಂದಿರುತ್ತಿದ್ದವು.

## 2. ಹಾದಿವುಳ್ಳ ವೃತ್ತಾಕಾರದ ಕೋಣೆ ಗೋರಿಗಳು

ವೃತ್ತಾಕಾರದ ಈ ಕೋಣೆ ಗೋರಿಯು ಸಹ ಚಿಕ್ಕದಾದ ಹಾದಿಯನ್ನು ಹೊಂದಿರುತ್ತದೆ. ಅಲ್ಲದೇ ಒಳಗಿನ ಗೋರಿಯು (ವೃತ್ತಾಕಾರದಲ್ಲಿನ) ಆಯತಾಕಾರದಲ್ಲಿರುತ್ತದೆ. ಇದರ ಮೇಲಿನ ಟೋಪಿ ಕಲ್ಲಿಗೆ ಆಧಾರವಾಗಿ ಕಂಬಗಳನ್ನು ನಿಲ್ಲಿಸುತ್ತಿದ್ದರು. ಇವುಗಳಿಗೆ ಸಂಪೂರ್ಣ (ರಂಧ್ರವಿಲ್ಲದ) ಶಿಲಾ ಫಲಕಗಳು ಸುತ್ತಲೂ ಕಟ್ಟಲ್ಪಟ್ಟಿರುತ್ತದೆ. ಈ ಹಾದಿವುಳ್ಳ ವೃತ್ತಾಕಾರದ ಕೋಣೆ ಗೋರಿಗಳು ಸಾಮಾನ್ಯವಾಗಿ ಎರಡು ಮೀಟರ್ ಸುತ್ತಳತೆಯನ್ನು ಹೊಂದಿದೆ.

## 3. ಕೊಣ್ಣೂರು ಮಾದರಿಯ ಹಾದಿ-ಕೋಣೆ ಗೋರಿಗಳು

ಆಯತಾಕಾರದಲ್ಲಿರುವ ಈ ಗೋರಿಗಳು ಸಹ ದಕ್ಷಿಣದಲ್ಲಿ ಚಿಕ್ಕದಾದ ಹಾದಿಯನ್ನು ಹೊಂದಿರುತ್ತವೆ. ಇವುಗಳು ಕೂಡಾ ಆಯತಾಕಾರದಲ್ಲಿ ಅಥವಾ ವೃತ್ತಾಕಾರದಲ್ಲಿರುತ್ತವೆ. ಇವು

ಸಾಮಾನ್ಯವಾಗಿ 2 ಮೀಟರ್ x 1 ಮೀಟರ್ x 20 ಸೆಂ. ಮೀಟರ್ x 80 ಸೆಂ. ಮೀಟರ್ ಅಳತೆ ಹೊಂದಿವೆ. ಇಂತಹ ಸುಮಾರು 20 ಗೋರಿಗಳ ಮಾದರಿ ಹಳಿಂಗಳಿಯಲ್ಲಿ ಹಾಗೂ 5 ಗೋರಿಗಳ ಮಾದರಿಗಳು ತೇರದಾಳದಲ್ಲಿ ಕಂಡು ಬಂದಿವೆ. ಆದರೆ ಇವುಗಳಲ್ಲಿ ಹೆಚ್ಚಿನವುಗಳು ನಾಶವಾಗಿದ್ದನ್ನು ನಾವು ಕಾಣುತ್ತೇವೆ.

**1. ಚಿಕ್ಕ ಚೌಕಾದ ಕೋಣೆ ಗೋರಿಗಳು**

ಇಂತಹ ಮಾದರಿಗಳು ಕೊಣ್ಣೂರು ಪ್ರದೇಶದಲ್ಲಿ ಹೆಚ್ಚಾಗಿ ಕಂಡು ಬಂದಿದೆ. ಇವು ಹಾದಿಯನ್ನು (ಪ್ಯಾಸೇಜ್) ಹಾಗೂ ಅದಕ್ಕೆ ರಂಧ್ರಗಳನ್ನು (ಪೋರ್ಟ್-ಹೋಲ್) ಹೊಂದಿರುವುದಿಲ್ಲ. ಕೆಲವು ಸಲ ಎರಡು-ಮೂರು ವೃತ್ತಗಳು ಕೂಡಿಕೊಂಡು ಒಂದು ಕೋಣೆ ಗೋರಿಯಾಗಿರುತ್ತವೆ. ಸಾಮಾನ್ಯವಾಗಿ ಕೋಣೆಗಳು 60 ಸೆಂಟಿ ಮೀಟರ್‌ನಿಂದ ಒಂದು ಸೆಂಟಿ ಮೀಟರ್‌ವರೆಗೆ ಚೌಕಾಕಾರವಾಗಿರುತ್ತವೆ. ಇದರ ಸುತ್ತಳತೆ 2 ಮೀಟರ್ ನಿಂದ 3 ಮೀಟರ್ ವಿಸ್ತೀರ್ಣದಲ್ಲಿರುತ್ತದೆ.

**ವೃತ್ತ ಕಲ್ಲು ರಾಶಿಗಳನ್ನು ಹೊಂದಿದಂತಹ ಕಲ್ಲು ಗೋರಿಗಳು**

ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದ ಸಮೀಪದ ಹಳಿಂಗಳಿಯ ದಕ್ಷಿಣ ಭಾಗದ ಎತ್ತರದ ಪ್ರದೇಶದ ಮೇಲೆ ಇಂತಹ ಸುಮಾರು 18 ಮಾದರಿಯ ಗೋರಿಗಳು ಕಂಡು ಬಂದಿದ್ದು, ಇಂತಹ ಗೋರಿಗಳು ಬೇರೆ ಪ್ರದೇಶದಲ್ಲಿಯೂ ಗೋಚರಿಸುತ್ತವೆ. ಈ ಶಿಲಾ ಗೋರಿಗಳು ಬೇರೆ ಬೇರೆ ಅಳತೆಯನ್ನು ಹೊಂದಿವೆ. ಅತಿ ಚಿಕ್ಕ ಗೋರಿ ಎಂದರೆ ಸುಮಾರು ಎರಡು ಮೀಟರದ್ದಾಗಿದ್ದು ಅತೀ ಹೆಚ್ಚೆಂದರೆ ಹನ್ನೆರಡು ಮೀಟರ್ ಸುತ್ತಳತೆಯನ್ನು ಹೊಂದಿದೆ. ಇವುಗಳಲ್ಲಿ 4 ರಿಂದ 6 ಮೀಟರ್ ಸುತ್ತಳತೆಯನ್ನು ಹೊಂದಿರುವ ಶಿಲಾ ಗೋರಿಗಳು ಸಾಮಾನ್ಯವಾಗಿವೆ. ವೃತ್ತ ಶಿಲಾ ಗೋರಿಗಳು ದೊಡ್ಡ ಕಲ್ಲುಗಳಿಂದ ಅಥವಾ ಆಯತಾಕಾರದ ಶಿಲಾಫಲಕಗಳಿಂದ ಸುತ್ತುವರೆದಿರುತ್ತವೆ. ಇದರ ವೃತ್ತ ಮಾತ್ರ ಸರಿಸಮನಾಗಿರುತ್ತದೆ.

**ಉಪಸಂಹಾರ**

ಕಲ್ಲು ಗೋರಿಗಳನ್ನು ಕಟ್ಟಲು ಸಾಮಾನ್ಯವಾಗಿ ಉಸುಕು ಮತ್ತು ಕಲ್ಲುಗಳನ್ನು ಹೆಚ್ಚಾಗಿ ಉಪಯೋಗಿಸಿದ್ದಾರೆ. ವೃತ್ತಗಳ ಸುತ್ತಗಳಲ್ಲಿ ಬಳಸಿದ ಕಲ್ಲುಗಳು, ಬಿಳಿ, ಬೂದುಬಣ್ಣ (ವೈಟಿಶ್ ಗ್ರೇ ಸ್ಟೋನ್) ದಿಂದ ಕೂಡಿವೆ. ಆದರೆ ಇಲ್ಲಿಯ ಗ್ರೀಕ್ ಅಥವಾ ಲ್ಯಾಟಿನ್ ಮಾದರಿಯ ಗೋರಿಗಳಲ್ಲಿ ಬಿಳಿಯ ಬೆಣಚುಕಲ್ಲನ್ನು ಬಳಸಿದ್ದಾರೆ. ಸುತ್ತಳತೆಯ ಕಲ್ಲು ರಾಶಿ ಗೋರಿಗಳಲ್ಲಿ ದಖನ್ ಪ್ರಸ್ಥಭೂಮಿಯ ಶಿಲೆಯನ್ನು ಬಳಸಲಾಗಿದೆ. ಮುಖ್ಯವಾಗಿ ಈ ಯುಗವನ್ನು ಗುರುತಿಸಲು ಗೋರಿಗಳನ್ನು ಗುರುತಿಸಲಾಗುತ್ತಿದೆ. ಮುಖ್ಯವಾಗಿ ಈ ಯುಗದ ಜನರು ಒಂದು ಕಡೆ ಶಾಶ್ವತವಾಗಿ ನೆಲೆ ನಿಂತು ಕಬ್ಬಿಣದ ಬಳಕೆಯನ್ನು ಮಾಡಿಕೊಂಡಿರುವುದು ತಿಳಿದುಬರುತ್ತದೆ. ಜನರಲ್ಲಿ ಈ ಹೊತ್ತಿಗಾಗಲೇ ನಂಬಿಕೆಗಳು, ಆಚರಣೆಗಳು ತಲೆ ಎತ್ತಿದ್ದವು. ಅಂದರೆ ಶವ ಸಂಸ್ಕಾರವು ಇವರಲ್ಲಿ ಒಂದು ನಂಬಿಕೆಯಾಗಿ ರೂಢಿಯಲ್ಲಿತ್ತು. ಹಾಗಾಗಿ ಮಾನವ ಸತ್ತ ನಂತರ ದೇಹವನ್ನು ಹೂಳುವುದು ಮತ್ತು ಅದರ ಮೇಲೆ ಒಂದು ಗೋರಿಯನ್ನು ನಿರ್ಮಿಸುವುದು ಕಂಡುಬರುತ್ತದೆ. ಹಾಗಾಗಿ ಮಾನವ ತನ್ನ ಅನುಕೂಲಕ್ಕಾಗಿ ರೂಢಿ ಸಂಪ್ರದಾಯಗಳನ್ನು ಜಾರಿಗೊಳಿಸಿಕೊಂಡಿದ್ದನು. ಒಟ್ಟಿನಲ್ಲಿ ಈ ಯುಗದ ಸಂಸ್ಕೃತಿಯ ಕುರುಹುಗಳು ತೇರದಾಳ ಪರಿಸರದಲ್ಲಿ ದೊರೆತಿದ್ದರಿಂದ ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ಮಾನವ ವಾಸವಾಗಿದ್ದನು ಎಂಬುದು ವೇದ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**


1. ರಮೇಶ ಕುಂಬಾರ., (2020) ತೇರದಾಳ ಪರಿಸರದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ. ಜ್ಞಾನದೀಪ ಫೌಂಡೇಶನ್ ತೇರದಾಳ.
2. ಅಂಬಳಿಕೆ ಹಿರಿಯಣ್ಣ., (2009) ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
3. ಇರ್ಫಾನ್ ಹಬೀಬ್., (2008) ಪ್ರದೀಪ್ ಬೆಳಗಲ್ (ಅನು), ಪೂರ್ವೇತಿಹಾಸ, ಚಿಂತನ ಪ್ರಕಾಶನ, ಬೆಂಗಳೂರು.
4. ಇರ್ಫಾನ್ ಹಬೀಬ್ (ಮೂ.ಲೇ)., (2011) ಪ್ರದೀಪ್ ಬೆಳಗಲ್ ಮತ್ತು ಇತರರು (ಅನು), ಸಿಂಧೂ ನಾಗರಿಕತೆ, ಚಿಂತನ ಪುಸ್ತಕ, ಬೆಂಗಳೂರು.
5. ಕೋಸಾಂಬಿ ಡಿ. ಡಿ., (2011) (ಮೂ.ಲೇ) ವೇಣುಗೋಪಾಲ ಟಿ.ಎಸ್. ಮತ್ತು ಶೈಲಜಾ (ಅನು), ಪ್ರಾಚೀನ ಭಾರತಿದ ಸಂಸ್ಕೃತಿ ಮತ್ತು ನಾಗರಿಕತೆ ಚಾರಿತ್ರಿಕ ರೂಪರೇಷೆ, ಚಿಂತನ ಪ್ರಕಾಶನ, ಬೆಂಗಳೂರು.
6. ನರಸಿಂಹಮೂರ್ತಿ ಎ.ವಿ.: (2010) ಕರ್ನಾಟಕ ಪುರಾತತ್ವ ಕೆಲವು ಅಧ್ಯಯನಗಳು, ಪ್ರಸಾರಾಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ಮೈಸೂರು.
7. ವಾಸುದೇವ ಬಡಿಗೇರ.: (2010) ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-5 ಬಸವನ ಬಾಗೇವಾಡಿ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.